doc-53
T.P-2

ಗೋರಕ್ಷಣ
GORAKSHANA

10 ನೇ ವರ್ಷ — 1959 ನೇ ಆಗಸ್ಟ್ ತಾ || 28 Aug 59

Protect the Cow ಗೋಸಂರಕ್ಷಣೆ ಮಾಡಿ

ಗೋರಕ್ಷಣ ಪತ್ರಿಕೆಗೆ ಬೆಂಬಲಿಗರಾಗಿರಿ

ಗೋರಕ್ಷಣೆ, ಪ್ರಾಣಿದಯೆ, ಪಶುಸೈದ, ಶಾಕಾಹಾರ ವಿಚಾರಗಳ ಪ್ರಚಾರದ ಏಕೈಕ ಕನ್ನಡ ಪತ್ರಿಕೆ.

Advertise in Goraksana and help the pious cause

ಗೋರಕ್ಷಣ ಪತ್ರಿಕೆಗೆ ಸಹಾಯಾರ್ಥವಾಗಿ ಮತ್ತು ಪ್ರಕಟಿಸಲು ಅನುಕೂಲವಾದ ಲೇಖನಗಳನ್ನೂ ವಾರ್ತೆಗಳನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ವಿಳಾಸ : ಗೋರಕ್ಷಣ ಆಫೀಸ್ ಚಾಮರಾಜಪುರಂ, ಮೈಸೂರು

ಹಿಂದೂ, ಬೌದ್ಧ, ಜೈನ, ಮುಸ್ಲಿಂ ಆಳ್ವಿಕೆಯಲ್ಲಿ

ಗೋ ಪಾ ಲ ನೆ

— 2 —

ಮಹಾಭಾರತಕ್ಕೆ ಪಂಚಮ ವೇದವೆಂದು ಹೆಸರು ; ಅದಂಲ್ಲಿ ಗೋವುಗಳ ಮಹಿಮೆ, ಮಹತ್ವ ಮತ್ತು ಉಪಕಾರದೇಯತ್ವಗಳ ವಿಷಯದಲ್ಲಿ ಅನೇಕ ಅಧ್ಯಾಯ ಗಳಿವೆ ; ಅವುಗಳಲ್ಲಿ ಕೆಲವು ವಚನಗಳನ್ನು ನೋಡಿ—

ನಾಭಸ್ತುಲ್ಯಂ ನ ಪಶ್ಯಾಮಿ ಧನಂ ಕಿಂಚಿದಿಹಾಚ್ಯುತ ॥

(ಅನುಶಾಸನಿಕ 51–26)

ಕೃಷ್ಣನೇ ! ನಾನು ಈ ಪೃಥಿವಿಯಲ್ಲಿ ಗೋವುಗಳಿಗೆ ಸಮಾನವಾದ ಧನವನ್ನೂ ಕಾಣುವುದಿಲ್ಲ

ಪ್ರೋಲಕ್ಷ್ಮ್ಯಾಃ ಸದಾಮೂಲಂ ಗೋಷು ವಾಪ್ಯಾನವಿದ್ಯತೆ |
ಏತೇವ ಸದಾಗಾವೋ ದೇವತಾನಾಂ ಪರಮಂ ಹವಿಃ ॥
ಘೃತಂ ಹ್ಯವ್ಯಯಂ ದಿವ್ಯಂ ಕ್ಷರಂತಿಚ |
ತಸ್ಮಾ ಚ್ಚೈತಾಃ ಸರ್ವಲೋಕ ನಮಸ್ಕೃತಾಃ ॥
ನಾ ದೇವ್ಯೋ ನಾನ್ಯತ್ ಕಿಂಚಿತ್ ಪರಂಸ್ಮೃತಂ ॥

(ಅನುಶಾಸನಿಕ ಪರ್ವ 51–28, 30, 33)

ಗೋವು ಮೂಲವು, ಸದಾ, ಸರ್ವದಾ, ಗೋವುಗಳೇ ಆಗಿವೆ : ಗೋವು ಬಗೆಯು ಪಾಪವೂ ಇಲ್ಲ ; ಗೋವುಗಳು ಸದಾ ಮನುಷ್ಯರಿಗೆ ಅನ್ನ ತೆಗಳಿಗೆ ಶ್ರೇಷ್ಠವಾದ ಹವಿಯನ್ನೂ ಕೊಡುತ್ತವೆ : ಗೋವುಗಳು ಅಮೃತ ಧಾರಣೆಯನ್ನು ಮಾಡುವುವು, ಮತ್ತು ಕರೆದಾಗ ಪ್ರವಹಿ ವು ಅಮೃತದ ಭಂಡಾರವಾಗಿವೆ ; ಆದುದರಿಂದ ಎಲ್ಲರೂ ಅವುಗಳಿಗೆ ರು ; ಗೋವುಗಳು ಸಮಸ್ತ ಕಾಮನೆಗಳನ್ನೂ ಪೂರ್ಣಗೊಳಿಸುವ ದ್ದಾರೆ ; ಅವುಗಳಿಗಿಂತ ಶ್ರೇಷ್ಠವಾದುವು ಬೇರೆ ಯಾವುವೂ ಇಲ್ಲ

ತಾತ್ಮಾ ಭೀಷ್ಮಪಿತಾಮಹನು ಯುಧಿಷ್ಠಿರ ಮಹಾರಾಜನನ್ನು ಕುರಿತು ನ್ನಾನೆ—

ನಾ ಹವಿಷಾಂಡಘ್ನಾ ಶಕೃತಾ ಚಾ ಥ ಚರ್ಮಣಾ |
ಉಪಕುರ್ವಂತಿ ಶೃಂಗೈರ್ವಾಲೈಶ್ಚ ಭಾರತ ॥
ಏತಾ ಸತ್ಯತಾಂ ಸದೈತಾಃ ಕರ್ಮ ಕುರ್ವತೇ ॥
ಯೋ ದುಃಖಮಾಸಾಂ ಭವತ್ಯುತ ॥

(ಅನುಶಾಸನಿಕಪರ್ವ 66–39 ಮತ್ತು 41)

ಕಟ್ಟುವಾಗ ಹಾಲು, ಮೊಸರು, ಬೆಣ್ಣೆ, ತುಪ್ಪಗ ರಿಂದ, ಸತ್ತನಂತರ ತನ್ನ ತೊಗಲು, ಮೂಳೆ, ಕೊಂಬುಗಳಿಂದ ನಮಗೆ ಉಪಕಾರ ಮಾಡುತ್ತವೆ ; ಅವು ಶೀ ತ ಸಹಿಸಿಕೊಂಡು (ಸಹಿಸಿಕೊಂಡು) ಸದಾ ನಮ್ಮ ಕೆಲಸವನ್ನೇ ಮಾಡು ; ಚಳಿಯು ಬೀಳುತ್ತಿದ್ದರೂ ಕೂಡಾ ಕಷ್ಟವೆಂದೆಣಿಸದೆ ತಮ್ಮ ಕಾರ್ಯ ವೃತ್ತವಾಗಿರುತ್ತವೆ.

ಶ್ರೀ ಕೃಷ್ಣ ಪರಮಾತ್ಮನ
ಕೃಪೆಯಿಂದ
" ಗೋ ರ ಕ್ಷ ಣ " ಕ್ಕೆ
10 ನೇ ವರ್ಷ ಪ್ರಾರಂಭವಾಯಿತು

★

ಶ್ರೀ ವರ್ಧಮಾನ ಸ್ಥಾನಿಕವಾಸಿ
ಶ್ರಾವಕ ಸಂಘ, ರಾಯಚೂರು
ಇವರಿಂದ ಮಹಾವೀರರ ವಾಣಿ
ಪ್ರಕಟಣೆ

ಅಹಿಂಸೆಯು ಯಾವಾಗಲು ಮನು ಷ್ಯನನ್ನು ವೀರ ಸಾಹಸಿ, ಮತ್ತು ಪವಿ ತ್ರ ಮಾಡುತ್ತಿದೆ.

★

ಜಗತ್ತಿನ ಪ್ರಾಣಿಗಳನ್ನು ಬದುಕಿಸು ವ ಯೋಗ್ಯತೆ ನಿಮಗೆ ಇಲ್ಲದ್ದರಿಂದ ಅ ವುಗಳ ಜೀವನವನ್ನು ಹರಣ (ಹಿಂಸೆ) ಮಾಡುವ ಅಧಿಕಾರ ನಿಮಗಿಲ್ಲ.

★

ವಿಶ್ವದ ಪ್ರಾಣಿಗಳಲ್ಲಿ ನಿಮ್ಮ ಕುಟುಂ ಬದಂತೆ ಪ್ರೇಮಮಾಡಿರಿ.

★

ದೇವಿ ಮತ್ತು ದೇವತೆಗಳ ಹೆಸರನ್ನು ತೆಗೆದುಕೊಂಡು ಜೀವ ಬಲಿದಾನ, ಮತ್ತು ಧರ್ಮದ ಹೆಸರನ್ನು ತೆಗೆದುಕೊಂಡು ಜೀವಹಿಂಸೆ ಮಾಡುವುದು ಧರ್ಮದ ಅಪಮಾನ.

ವಿವಿಧ ವರ್ತಮಾನ

ಜಯಪುರ 21— ಚಿಕ್ಕಮಗಳೂರು ಜಿಲ್ಲಾ ಜಯಪುರ ಸಮೀಪ ಕೂವೆ ಎಸ್ಟೇ ಟಿನಲ್ಲಿ ಅಯ್ಯಕ್ಕಣ್ಣ ಶಿವಮಾಲೆ, ಪೆರಿಯ ವೀರಮುತ್ತು ಎಂಬವರು ಗೋ ಹತ್ಯೆ ಮಾಡುತ್ತಿರುವುದನ್ನು ಈ ಊರಿನ ಪೋಲೀಸರು ಪತ್ತೆಮಾಡಿ ಮುಂದಿನ ಕ್ರಮ ಜರುಗಿಸಿದ್ದರಲ್ಲಿ ಅಪರಾಧಿಗಳಿಗೆ ನರಸಿಂಹರಾಜಪುರ ಕೋರ್ಟಿನಲ್ಲಿ ದಿ. 4 ರಂದು ತಲಾ ರೂ. 25 ಜುಲ್ಮಾನೆ ತಪ್ಪಿದರೆ 15 ದಿನ ಸಜಾ ವಿಧಿಸಿರುವುದಾಗಿ ತಿಳಿಯಬರುತ್ತದೆ.

ವೃಂದಾವನದ ದ್ವಾರಕಾನಾಥ ದೇವಾ ಲಯದಲ್ಲಿ ಗೋಕುಲಾಷ್ಟಮಿಯ ದಿವಸ ಶ್ರೀ ಕೃಷ್ಣ ವಿಗ್ರಹವಿಟ್ಟು ಕೂ ಗಿ ಲು ಸುಮಾರು 7 ಲಕ್ಷ ರೂಗಳು ಬೆಲೆ ಬಾ ಳು 7 ಅಡಿ ಎತ್ತರದ ಸುವರ್ಣ ಉಡುಪ್ಪಿ ಲೆ ಇರುವುದು.

ನವದೆಹಲಿ 4— ವ್ಯವಸಾಯ ಮತ್ತು ಪಶುಪಾಲನೆಗೆ 3 ನೇ ಯೋಜನೆಯಲ್ಲಿ ರೂ 1 ಸಹಸ್ರ ಕೋಟಿ ಅಂದಾಜು ಮಾ ಡಲಾಗಿದೆಯೆಂದು ಗೊತ್ತಾಗಿದೆ.

ನವದೆಹಲಿ 27— ದಕ್ಷಿಣ ಪ್ರಾದೇ ಶಿಕ ಪಶುಪ್ರದರ್ಶನವು ಸೆಪ್ಟಂಬರು 24 ರಿಂದ 29 ರವರೆಗೆ ಮದರಾಸಿನಲ್ಲಿ ನಡೆ ಯುವುದು.

ನವದೆಹಲಿ 27— 3 ನೇ ಯೋಜನೆ ಯಲ್ಲಿ ಅಪತ್ಯಕ್ಷ ತೆರಿಗೆ ಸೆಚ್ಚುವುದೆಂ ದು ಹೇಳಲಾಗಿದೆ.

ಬೆಂಗಳೂರು 26— ಇಲ್ಲಿ ಸಂಕ್ಯತೆ ಅಭಾವಕ್ಕೆ ಕಾರಣವು, ದಾಸ್ತಾನುದಾ ರರು ಸಕ್ಕರೆಯನ್ನು ಕೇರಳ ಮತ್ತು ಮದ ರಾಸು ರಾಜ್ಯದ ಸೇಲಂ ಮತ್ತು ಕೊಯ ಮತ್ತೂರುಗಳಿಗೆ ಅಕ್ರಮವಾಗಿ ಸಾಗಿ ಸುತ್ತಿರುವುದೇ ಆಗಿದೆ, ಎಂದು ಹೇಳ ಲಾಗಿದೆ

ಗೋಸಂವರ್ಧನ ಯೋಜನೆಗಳು

★

ಇಂದಿನ ಯುಗದಲ್ಲೂ ಜಾನುವಾರುಗಳು ನಮಗೆ ತುಂಬಾ ಪ್ರಯೋಜನಕಾರಿಯಾಗಿವೆ : ಕಲ್ಲಿದ್ದಲು, ಎಣ್ಣೆ ಮತ್ತು ವಿದ್ಯುತ್ತಿನಿಂದ ಉತ್ಪನ್ನವಾಗುವ ಶಕ್ತಿಯ ಮೂಲಕ ದೊರಕುತ್ತಿರುವ ಸಹಾಯ ನಾಡಿನ ಒಟ್ಟು ಅವಶ್ಯಕತೆಯಲ್ಲಿ ಶೇ. 20 ರಷ್ಟು ಮಾತ್ರ ; ಎತ್ತುಗಳು, ಕುದುರೆಗಳು, ಮತ್ತಿತರ ಜಾನುವಾರುಗಳೇ ಇನ್ನುಳಿದ ಶಕ್ತಿಸಾಧನಗಳ ಅವಶ್ಯಕತೆಯನ್ನು ಪೂರೈಸುತ್ತಿವೆ.

ಇನ್ನು ಹಸುಗಳಿಂದ ನಮಗೆ ಆಗುತ್ತಿರುವ ಸಹಾಯವೋ ಅಪಾರ : ನಮ್ಮ ದೇಶದಲ್ಲಿ ದೊರಕುತ್ತಿರುವ ಒಟ್ಟು 477 ಮಿಲಿಯನ್ ಪೌಂಡುಗಳಷ್ಟು ಹಾಲಿನ ಪೈಕಿ ಶೇ. 45 ರಷ್ಟನ್ನು ಹಸುಗಳೇ ಪೂರೈಸುತ್ತಿವೆ ; ಅಲ್ಲದೆ ಚರ್ಮದ ಕಾರ್ಖಾನೆಗಳಿಗೆ 16 ಮಿಲಿಯನ್ ಚರ್ಮಗಳೂ ಒದಗಿ ಬರುತ್ತಿದೆ : ಅಷ್ಟೇ ಅಲ್ಲದೆ ದನದ ಗೊಬ್ಬರ ಸಹ ನಮ್ಮ ಉಪಯೋಗಕ್ಕೆ ಒದಗುತ್ತಿದೆ ; 500 ಮಿಲಿಯನ್ ಟನ್ ಗಳಷ್ಟು ಪ್ರಮಾಣದ ಈ ಗೊಬ್ಬರವನ್ನು ವಿವೇಕಯುತವಾಗಿ ಉಪಯೋಗಿಸಿದರೆ ಜಮೀನಿಗೆ ಇದು ತುಂಬಾ ಪೋಷಕ ಪಾದೀತು.

ಜಾನುವಾರುಗಳಿಗೆ ಮೇವು ತುಂಬಾ ಕಡಿಮೆ ಇವೆ: ನಮ್ಮ ಜಾನುವಾರುಗಳಿಗೆ ಅತ್ಯಾವಶ್ಯಕವಾದ ಪೌಷ್ಟಿಕ ಆಹಾರದ ಅಭಾವ ವಿಶೇಷವಾಗಿದೆ ; ಇದನ್ನು ಪೂರೈಸುವುದೇ ಒಂದು ಸಮಸ್ಯೆಯಾಗಿದೆ ; ಅಂತೆಯೇ ನಮ್ಮ ದೇಶದ ಜಾನುವಾರು ಸಂಪತ್ತು ತುಂಬಾ ಬಡಕಲಾಗಿದೆ ಮತ್ತು ಕೊಡುವ ಹಾಲಿನ ಪ್ರಮಾಣ ಸಹ ತುಂಬಾ ಕಡಿಮೆ

ಅಂತೆಯೇ ವೈಜ್ಞಾನಿಕ ವಿಧಾನಗಳ ಮೂಲಕ ಜಾನುವಾರು ಸಂಪತ್ತನ್ನು ಅಭಿವೃದ್ಧಿಪಡಿಸಿ ಉತ್ತಮ ಜಾತಿಯ ಜಾನುವಾರು ನಮ್ಮ ದೇಶಕ್ಕೆ ಒದಗುವಂತೆ ಮಾಡುವುದು ಒಂದು ಮುಖ್ಯ ಕಾರ್ಯವಾದರೆ ಹೆಚ್ಚು ಪ್ರಮಾಣದಲ್ಲಿ ದನಗಳ ಮೇಪು ಬೆಳೆಯಲು ಕ್ರಮ ಕೈಗೊಳ್ಳಬೇಕಾದುದು ಇನ್ನೊಂದು ಮುಖ್ಯಕಾರ್ಯ.

ಭಾರತದಲ್ಲಿ ಇಂದು ದನಗಳು ಕೊಡುತ್ತಿರುವ ಹಾಲಿನ ಪ್ರಮಾಣ ಏನೇನೂ ಸಾಲದು : ವರ್ಷಕ್ಕೆ ಒಂದು ಹಸು ಸರಾಸರಿ 400 ಪೌಂಡುಗಳಷ್ಟು ಹಾಲು ಕೊಡುತ್ತದೆ ಎಂಬುದು ಸದ್ಯದ ಅಂದಾಜು ; ಈ ಪ್ರಮಾಣ ಪ್ರಪಂಚದ ಇತರ ದೇಶಗಳಿಗೆ ಹೋಲಿಸಿ ನೋಡಿದರೆ ತುಂಬಾ ಕಡಿಮೆ ; ನೆದರಲ್ಯಾಂಡ್ಸ್ ಮತ್ತು ಬೆಲ್ಜಿಯಂ ದೇಶಗಳಲ್ಲಿ ಕ್ರಮವಾಗಿ ಈ ಪ್ರಮಾಣ 8371 ಮತ್ತು 4796 ಪೌಂಡುಗಳಷ್ಟಿದೆಯೆಂದರೆ ನಿಜಕ್ಕೂ ಆಶ್ಚರ್ಯವೆನ್ನಿಸುತ್ತದೆ ; ಭಾರತದಲ್ಲಿ ಒಂದು ದಿನಕ್ಕೆ ಒಬ್ಬ ಮನುಷ್ಯನು ಉಪಯೋಗಿಸುವ ಹಾಲಿನ ಪ್ರಮಾಣದ ಸರಾಸರಿ ಅಂದಾಜು ಐದು ಔನ್ಸು ಮಾತ್ರ ; ಯು ಸ್ ಟಿ ಡ್ ಕಿಂಗ್ಡಂನಲ್ಲಿ ಈ ಪ್ರಮಾಣ 16 ಔನ್ಸು ; ನ್ಯೂಜಿಲೆಂಡು 32 ; ಭಾರತದಲ್ಲಿ ಪ್ರತಿಯೊಬ್ಬ ವ್ಯಕ್ತಿ ಕನಿಷ್ಠ ಪಕ್ಷ ದಿನಕ್ಕೆ 10 ಔನ್ಸುಗಳಷ್ಟು ಹಾಲು ಉಪಯೋಗಿಸುವಂತಾದರೆ ಮಾತ್ರ ಅದು ಯೋಗ್ಯ ಆಹಾರ ಪ್ರಮಾಣವಾದೀತು

ಅಂತೆಯೇ ಮುಂದಿನ ಐದು ವರ್ಷಗಳ ಅವಧಿಯಲ್ಲಿ ಈಗ ಒದಗಿಬರುತ್ತಿರುವ ಹಾಲಿನ ಪ್ರಮಾಣವನ್ನು ದ್ವಿಗುಣಗೊಳಿಸಬೇಕಾದುದು ಅತ್ಯಾವಶ್ಯಕ ; ಭಾರತದ ಹಸುಗಳು ಎರಡರಷ್ಟು ಹೆಚ್ಚು ಹಾಲು ಕೊಡುವಂತಾಗಬೇಕು.

ನಮ್ಮ ದೇಶದ ಜಾನುವಾರುಗಳಿಗೆ ಉತ್ತಮ ಪೌಷ್ಟಿಕ ಆಹಾರ ಇಲ್ಲ ; ಈ ಕಾರಣ ಅವು ತುಂಬಾ ಬಡಕಲು : ವೈಜ್ಞಾನಿಕ ವಿಧಾನಗಳ ಮೂಲಕ ಅವುಗಳ ಅಭಿವೃದ್ಧಿಕಾರ್ಯ ಹಾಗೂ ಪಾಲನೆ ಪೋಷಣೆ ನಡೆಯಬೇಕಾದುದು ಅತ್ಯಾವಶ್ಯಕ.

ಅಲ್ಲದೆ ಭಾರತದ ಎಷ್ಟೋ ಕಡೆಗಳಲ್ಲಿ ಜಾನುವಾರುಗಳ ಅಭಿವೃದ್ಧಿಗೆ ಉತ್ತಮ ಹವಾಗುಣವಿಲ್ಲ ; ನಾಡಿನ ವಿಭಜನೆಯಿಂದಾಗಿ ಒಳ್ಳೇ ಲಾಭದಾಯಕ ಗೋಸಂಪತ್ತಿಗೆ ಹೆಸರಾದ ಪ್ರದೇಶಗಳು ಪಾಕಿಸ್ತಾನಕ್ಕೆ ಸೇರಿಹೋದವು ; ಅದರೂ ಭಾರತದಲ್ಲಿ ಇನ್ನೂ ಸುಮಾರು 25 ಜಾತಿಗಳಿಗೆ ಸೇರಿದ ಗೋವುಗಳು ಲಭ್ಯವಿವೆ.

ಅಪೆರಾ— 28–8–59 ರಿಂದ
ಅಮೋಘ ಪ್ರಾರಂಭ
ಸಕಲರೂ ನೋಡಿ ಆದಂದಿಸಬೇಕಾದ ಮಹೋನ್ನತ ಕನ್ನಡ ಚಿತ್ರರತ್ನ
ಧರ್ಮ ವಿಜಯ (ಕನ್ನಡ)
ಪಾತ್ರ— ಹರಿಣಿ, ಹೇಮಲತಾ, ರಾಜಲಕ್ಷ್ಮಿ, ರಾಜಕುಮಾರ್, ಸಿದ್ದಯ್ಯಸ್ವಾಮಿ ನರಸಿಂಹರಾಜು, ಸೊಂಟ್ ಅಶ್ವತ್ಥಶಾಸ್ತ್ರಿ, ಬ್ರದರ್ಸ್, ಮಾಸ್ಟರ್ ವೆಂಕಟೇಶ್
— ದಿನ 3 ಆಟಗಳು —

ವುಡ್‌ಲ್ಯಾಂಡ್ಸ್ ಕೀರ್ತಿಯುತ 3 ನೇ ವಾರ
ಪ್ರತಿಯೊಬ್ಬರೂ ನೋಡಿ ಆನಂದಿಸಬೇಕಾದ ಮನಮೋಹಕ ಹಿಂದಿ ಚಿತ್ರ
ಲಾ ಮ್ಯಾರೇಜ್
ಪಾತ್ರ— ದೇವ್ ಆನಂದ್, ಮಾಲಾ ಸಿನ್ಹಾ, ಪ್ರೋನೋತಿ ಮತ್ತು ಅಭಿ
ದಿನವಹಿ 3 ಪ್ರದರ್ಶನಗಳು

ಗೋರಕ್ಷಣ, ಪ್ರಾಣಿದಯಾ ಕಾರ್ಯಗಳು ಹೆಚ್ಚಿಬೆಚ್ಚಾಗಿ



SHAKTI SUDHA
A Superb Tonic
ಎಲ್ಲ ವಿಧದ ಆಯುರ್ವೇದ ಔಷಧಗಳಿಗೂ For Qu
ಅಶೋಕಾ ಫಾರ್ಮಸಿ L. N
ಲ್ಯಾನ್ಸ್‌ಡೌನ್ ಬಜಾರ್ ಮೈಸೂರು Sivara

Edited, Printed & Published by Dharma Prachara Nur Krishna Rao, at the Satyavadi Press, Chamarajapuram